**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ:**

ವಿಷಯ:

ಬೆಂಗಳೂರು ನಗರ ಜಿಲ್ಲೆ ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ನಂ.30 ರಲ್ಲಿ ಒಟ್ಟು 57 ಎಕರೆ 30 ಗುಂಟೆ ಜಮೀನಿದ್ದು ಇದರ ಪೈಕಿ 37 ಎಕರೆ 30 ಗುಂಟೆ ವಿಸ್ತೀರ್ಣದ ಜಮೀನನ್ನು ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಿ ಅವಾರ್ಡ್ ನೋಟೀಸ್ ನ್ನು ನೀಡಲಾಗಿದೆ. ಈ ಜಮೀನಿನ ಪೈಕಿ 8 ಎಕರೆ 20 ಗುಂಟೆ ಜಮೀನು ಲೇಟ್ ಆರೋಗ್ಯಸ್ವಾಮಿ ಮತ್ತು ಆರೋಗ್ಯಮ್ಮ ಮತ್ತು ಅವರ ಸಹೋದರ ರಫೀಲ ಎಂಬುವರ ಹೆಸರಿನಲ್ಲಿ ಖಾತೆ ಆಗಿದ್ದು, ಇವರಿಗೆ ಅವಾರ್ಡ್ ನೀಡಲು ಕನ್ಸಂಟ್ ಅವಾರ್ಡ್ ಮತ್ತು ಹೈತೀರ್ಪು ಆಗಿರುತ್ತದೆ. ಈ ಜಮೀನಿನಲ್ಲಿ ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ವಸತಿ ಸಮುಚ್ಚಯವನ್ನು ನಿರ್ಮಾಣ ಮಾಡಿರುತ್ತಾರೆ. ಹೈತೀರ್ಪಿನಲ್ಲಿ ಇವರಿಗೆ 81456 ಚದರ ಅಡಿ ಅಭಿವೃದ್ಧಿ ಆಗಿರುವ ನಿವೇಶನವನ್ನು ನೀಡಬೇಕೆಂದು ತೀರ್ಮಾನವಾಗಿರುತ್ತದೆ. ಆದರೆ ಜಮೀನು ಮಾಲೀಕರಿಗೆ ಜಮೀನಿನ ಹಣ ನೀಡಲು ಪ್ರಾಧಿಕಾರದ ಇಂಜಿನಿಯರ್ ವಿಭಾಗವು ವಿನಾ ಕಾರಣ ತೊಂದರೆ ನೀಡುತ್ತಿದ್ದು, ಸದರಿ ಮೂಲ ಜಮೀನು ಮಾಲೀಕರಿಗೆ ಕೂಡಲೇ ಪ್ರಾಧಿಕಾರದ ಭೂಸ್ವಾಧೀನ ಇಲಾಖೆಯವರು ನಿಗದಿಪಡಿಸಿರುವಂತೆ ಹಣ ಪಾವತಿಸಿ ಮತ್ತು ಅಭಿವೃದ್ಧಿ ಆಗಿರುವ ನಿವೇಶನಗಳನ್ನು ಮಂಜೂರು ಮಾಡಿ ಸದರಿಯವರಿಗೆ ನ್ಯಾಯ ಒದಗಿಸುವ ಕುರಿತು.

ಉತ್ತರ:

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ನಂ.30 ರಲ್ಲಿ ಒಟ್ಟು 57ಎಕರೆ 37ಗುಂಟೆ ಖರಾಬು ಜಮೀನಾಗಿದ್ದು, ಈ ಪೈಕಿ 37ಎಕರೆ 10ಗುಂಟೆ ಜಮೀನಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 51 ಎಂಎನ್‌ಎಕ್ಸ್ 2010, ದಿನಾಂಕ:18.02.2010 ರಂತೆ ನಾಡಪ್ರಭು ಕೆಂಪೇಗೌಡ ಬಡಾವಣೆ ರಚನೆಗಾಗಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನು ಸರ್ಕಾರಿ ಖರಾಬು ಜಮೀನಾಗಿದ್ದು, ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ರವರ ಪತ್ರ ಸಂಖ್ಯೆ: ಎಲ್.ಎನ್.ಡಿ/ ಕೆಹೆಚ್/ಸಿಆರ್/ 158/2019-20, ದಿನಾಂಕ.19.12.2019 ರಂದು ನೀಡಿರುವ ಜಮೀನಿನ ನೈಜತೆಯ ವರದಿ ನೀಡಿರುವಂತೆ, ಶ್ರೀಮತಿ ಆರೋಗ್ಯಮ್ಮ ಕೋಂ ಲೇಟ್ ಬಿ.ಪಿ.ಚೌಡಪ್ಪ @ಪುಟ್ಟಯ್ಯ ಮತ್ತು ರಾಮಫಲ ಬಿನ್ ಲೇಟ್ ಬಿ.ಪಿ ಚೌಡಪ್ಪ @ ಬಿ ಪುಟ್ಟಯ್ಯ ರವರು 8ಎಕರೆ 20ಗುಂಟೆ ಜಮೀನಿಗೆ ಖಾತೆದಾರರಾಗಿದ್ದು, ಭೂಪರಿಹಾರವಾಗಿ 81,456 ಚ.ಅಡಿ ಅಭಿವೃದ್ಧಿಪಡಿಸಿದ ನಿವೇಶನಗಳಿಗೆ ದಿನಾಂಕ:29.03.2022 ರಂದು ಐತೀರ್ಪು ಅನುಮೋದನೆಯಾಗಿರುತ್ತದೆ. ದಿನಾಂಕ: 11.04.2022 ರಂದು ಭೂಸ್ವಾಧಿನ ಕಾಯ್ದೆ ಕಲಂ 12(2)ರಡಿ ಖಾತೆದಾರರಿಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ. ದಿನಾಂಕ: 22.07.2022 ರಂದು ಸದರಿ 8ಎಕರೆ 20ಗುಂಟೆ ಜಮೀನಿನ ಸ್ವಾಧೀನವನ್ನು ಕಲಂ 16(1) ರಂತೆ ಖಾತೆದಾರರಿಂದ ಪಡೆದು, ಕಾರ್ಯಪಾಲಕ ಅಭಿಯಂತರರು, ನಾಡಪ್ರಭು ಕೆಂಪೇಗೌಡ ಬಡಾವಣೆ ರವರಿಗೆ ಹಸ್ತಾಂತರಿಸುವ ಸಮಯದಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಹಸ್ತಾಂತರಿಸಲು ಸಾಧ್ಯವಾಗಿರುವುದಿಲ್ಲ.

. . . .2)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆಗಾಗಿ ಸದರಿ ಸರ್ವೆ ನಂ.30 ರಲ್ಲಿ 7ಎಕರೆ 28ಗುಂಟೆ ಜಮೀನನ್ನು ಈ ಹಿಂದೆಯೇ ಬಳಸಲಾಗಿರುತ್ತದೆ. ಈ ನಿಟ್ಟಿನಲ್ಲಿ ತಹಶೀಲ್ದಾರ್ ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯ ಭೂಮಾಪಕರೊಂದಿಗೆ ಸದರಿ ಸರ್ವೆ ನಂ.30 ರಲ್ಲಿನ 8ಎಕರೆ 20ಗುಂಟೆ ಜಮೀನಿನ ಜಂಟಿ ಸರ್ವೆ ಕಾರ್ಯ ನಡೆಸಲು ಪ್ರಸ್ತುತ ಕ್ರಮವಹಿಸಲಾಗುತಿದೆ. ತತ್ಸಂಬಂಧ ಬೆಳವಣಿಗೆಗಳನ್ನು ಆಧರಿಸಿ ಭೂಪರಿಹಾರದ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 406 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

134 C